ಇ. ಇಲ್ಲ, ಆದಾಗ್ಯೂ ಬ್ಯಾಂಕು ಅಧಿಕಾರಿಗಳು ಏಳು ಜನ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಅವರ ಸಾಲ ಮನ್ನಾ ಮಾಡುವಲ್ಲಿ ಕಣ್ ತಪ್ಪಿನಿಂದ ವಿಫಲರಾಗಿದ್ದುದು ನಿಜವಾಗಿರುತ್ತದೆ. ಯೋಜನೆಯು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಯಾವುದೇ ಪರಿಹಾರ ಈಗ ನೀಡಲು ಸಾಧ್ಯವಿಲ್ಲ.

ಈ. ನಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಬ್ಯಾಂಕ್ ಅಧಿಕಾರಿಗಳು ರಾಜ್ಯ ಬ್ಯಾಂಕಿನ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಆದೇಶಿಸಲಾಗುವುದು.

ಭೂಸ್ವಾಧೀನ ಕಾಯಿದೆಯಿಂದ ರೈತರಿಗೆ ತೊಂದರೆ.

325 (1692): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಭೂಸ್ವಾಧೀನ ಕಾಯ್ದೆಯಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿವೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. ಸರ್ಕಾರ ಈ ಕೆಳಕಂಡಂತೆ ಸೂಕ್ತ ಕ್ರಮ ತೆಗೆದುಕೊಂಡಿದೆ.

1. ಭೂಮಾಲೀಕರಿಗೆ ಶೀಘ್ರವೇ ಪರಿಹಾರ ಕೊಡುವುದರ ಸಲುವಾಗಿ ಸರ್ಕಾರವು ಭೂಸ್ವಾಧೀನ ನಡವಳಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ತಿ ಮಾಡುವುದಕ್ಕೆ ವೇಳಾ ಪಟ್ಟಿಯನ್ನು ಹೊರಡಿಸಿದೆ.

2. ಭೂಮಾಲೀಕರಿಗೆ ಯೋಗ್ಯ ಮಾರುಕಟ್ಟೆ ಬೆಲೆಯನ್ನು ನೀರಿದಂತೆ ಶೇ. 30 ಸೋಲೇಶಿಯಂ ಹಾಗೂ ಶೇ 12 ಹೆಚ್ಚುವರಿ ಹಣವನ್ನು ಕೊಡಲಾಗುತ್ತಿದೆ. ಇದಲ್ಲದೆ ಮರಮಟ್ಟುಗಳಿಗೆ ಪ್ರತ್ಯೇಕವಾಗಿ ಬೆಲೆಯನ್ನು ಸಹ ಕೊಡಲಾಗುತ್ತಿದೆ.

3. ಸರ್ಕಾರವು ದಿನಾಂಕ: 3.9.92ರ ಸಭೆಯಲ್ಲಿ ಎಲ್ಲಾ ಭೂಸ್ವಾಧೀನಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡುತ್ತಾ ಪರಿಹಾರ ಹಣವನ್ನು ಯಾವುದೇ ರೀತಿ ವಿಳಂಬ ಮಾಡದೇ ತುರ್ತಾಗಿ ಕೊಡಬೇಕಾಗಿ ಸೂಚನೆ ಕೊಡಲಾಗಿದೆ.

4. ಅವಶ್ಯಕತೆ ಇದ್ದ ಕಡೆ ಪುನರ್ವಸತಿಯನ್ನು ಸರ್ಕಾರ ಮಾಡುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಹಂಚಲಾದ ದರಖಾಸ್ತು ಜಮೀನುಗಳ ವಿವರ.

326 (1573): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1987 ರಿಂದ ಮೈಸೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನನ್ನು ದರಖಾಸ್ತು ಮೂಲಕ ಹಂಚಲಾಗಿದೆ (ವಿವರ ನೀಡುವುದು);

ಅ. ಅವರಲ್ಲಿ ಹರಿಜನ ಗಿರಿಜನರ ಸಂಖ್ಯೆ ಎಷ್ಟು (ವಿಳಾಸ ಹಾಗೂ ಹೆಸರುಗಳ ವಿವರ ನೀಡುವುದು);

ಇ. ದರಖಾಸ್ತು ಉಳಿಕೆ ಎಷ್ಟು ಜಮೀನು ಹಂಚಬೇಕಾಗಿದೆ;

ಈ. ದರಖಾಸ್ತು ಜಮೀನು ಹಂಚಿದೆ ಉಳಿದಿರುವ ತಾಲ್ಲೂ ಕುಗಳಾವುವು (ವಿವರ ನೀಡುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. 1,440-07 ಎಕರೆಗಳು.

ಆ. 545 ಜನರು.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ. ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ, 11.3.93ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ, 1525, 1568, 1921, 1222, 1274, 1095, 1224, 1226, 1959, 1619, 1148, 1138, 1379, 1380, 1129ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 52 ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹನಿ ಮತ್ತು ತುಂತುರು ನೀರಾವರಿ ಯೋಜನೆಯಿಂದ ರೈತರಿಗೆ ಸಿಗುವ ಸಹಾಯಧನ

1036 (1459): ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):-

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹನಿ ಮತ್ತು ತುಂತುರು ನೀರಾವರಿ ಯೋಜನೆಗಳನ್ನು ವೈಯುಕ್ತಿಕವಾಗಿ ಅಳವಡಿಸಲು ರೈತರಿಗೆ ಸರ್ಕಾರದ ಸಹಾಯ ಧನದ ಬಗ್ಗೆ ಇರುವ ನೀತಿ ನಿಯಮಗಳು ಏನು ?

ಆ. ಹನಿ ಮತ್ತು ತುಂತುರು ನೀರಾವರಿ ಅತಿ ಅವಶ್ಯಕ ಮತ್ತು ಲಾಭದಾಯಕ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ ?

ಇ. ವೈಜ್ಞಾನಿಕವಾಗಿ ಲಾಭದಾಯಕ ಕೃಷಿ ಉತ್ಪಾದನೆ ಹಾಗೂ ಕಡಿಮೆ ನೀರಿನ ಬಳಕೆಯ ಈ ಯೋಜನೆಗಳಿಗೆ ಹೆಚ್ಚಿನ ಸಹಾಯಧನ ನೀಡುವುದು ಅವಶ್ಯ ಇದೆ ಎನ್ನುವುದನ್ನು ಸರ್ಕಾರವು ಯೋಚಿಸಿದೆಯೇ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):-

ಅ. ಹನಿ ನೀರಾವರಿ ಪದ್ಧತಿಯನ್ನು 1 ರಿಂದ 10 ಎಕರೆ ಅನುಮೋದಿತ ತೋಟಗಾರಿಕೆ ಬೆಳೆಗಳಲ್ಲಿ ಅನುಮೋದಿತ ಹನಿ ನೀರಾವರಿ ತಯಾರಕ : ವಿತರಕ, ಸಂಸ್ಥೆಗಳಿಂದ ಅಳವಡಿಸುವ ಯಾವುದೇ ವರ್ಗದ ರೈತರಿಗೆ ಶೇಕಡ 50 ರಷ್ಟು ಹಾಗೂ ಹೆಚ್ಚು ಅಥವಾ ಗರಿಷ್ಠ 50 ಸಾವಿರ ರೂಪಾಯಿಗಳ